ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಹಾನಗಲ್.

ದಿನಾಂಕಃ 19 ನೇ ಮಾರ್ಚ್ ತಿಂಗಳು 2023 ರಂದು

ಸಿಸಿ ನಂ.673/2023

ಫಿರ್ಯಾದುದಾರರುಃ ಸರಕಾರ (ಹಾನಗಲ್ ಪೊಲೀಸರಿಂದ)

ವಿರುದ್ಧ

ಆರೋಪಿತರುಃ

1. ಮಹಾವೀರ ಬೆನಕಪ್ಪನವರ್,
ತಂದೆ ಶಾಂತಪ್ಪ, 36 ವರ್ಷ,
ವ್ಯವಸಾಯ, ವಾಸಃ ಯಳವಟ್ಟಿ ಗ್ರಾಮ,
ಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ

2. ವರ್ಧಮಾನ ಚೌಟಿ, ತಂದೆ ಆದಪ್ಪ,
65 ವರ್ಷ, ವ್ಯವಸಾಯ, ವಾಸಃ ಯಳವಟ್ಟಿ ಗ್ರಾಮ,
ಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ

3. ದುರ್ಗಪ್ಪ ಪೂಜಾರ್, ತಂದೆ ಬಸವಣ್ಣೆಪ್ಪ,
32 ವರ್ಷ, ಕೂಲಿ, ವಾಸಃ ನೆಲ್ಲಿಕೊಪ್ಪ ಗ್ರಾಮ,
ಹಾನಗಲ್ ತಾಲ್ಲೂಕು, ಹಾವೇರಿ ಜಿಲ್ಲೆ
**(ಮೃತಪಟ್ಟಿರುತ್ತಾರೆ)**

ದಂಡ ಪ್ರಕ್ರಿಯಾ ಸಂಹಿತೆಯ ಕಲಂ **251** ರ ಅಡಿಯಲ್ಲಿ ಆರೋಪಣಾ ಸಾರಾಂಶ

ದಿನಾಂಕಃ 06.11.2022 ರಂದು ಸಂಜೆ 7.30 ಗಂಟೆ ಸುಮಾರಿಗೆ ಹಾನಗಲ್ ಪೋಲೀಸ್ ಠಾಣಾ ವ್ಯಾಪ್ತಿಯ ಯಳವಟ್ಟಿ ಗ್ರಾಮದ ಮೊರಾರ್ಜಿ ಶಾಲೆಯ ಹತ್ತಿರ ಶ್ರೀ ವೀರನಗೌಡ ಕೊಟ್ರಗೌಡ @ ಪಾಟೀಲ ರವರ ಜಮೀನಿನ ಹತ್ತಿರ ತಡಸ-ಗೊಂದಿ ರಸ್ತೆಯ ಮೇಲೆ 1 ನೇ ಆರೋಪಿಯಾದ ನೀವು ಟ್ರ್ಯಾಕ್ಟರ್ ಇಂಜಿನ್ ನಂ.ಕೆಎ-27/ಟಿಸಿ-4054 ಹಾಗು 2 ನೇ ಆರೋಪಿಯಾದ ನೀವು ಟ್ರ್ಯಾಕ್ಟರ್ ಟ್ರೈಲರ್ ನಂ. ಕೆಎ-27/ಟಿಎ-6004 ಅನ್ನು ವಿಮೆ ಇಲ್ಲದೆ ಚಾಲನೆ ಮಾಡಿದ್ದು ಆದುದರಿಂದ 1 ಮತ್ತು 2 ನೇ ಆರೋಪಿತರಾದ ನೀವು ಭಾರತೀಯ ಮೋಟಾರು ವಾಹನ ಕಾಯ್ದೆಯ ಕಲಂ 146 ಸಹಕಲಂ 196 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರೆಂದು ನಿಮ್ಮ ಮೇಲೆ ಆರೋಪಣೆ ಇರುತ್ತದೆ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗು ಸಂದರ್ಭಗಳಂದು 1 ಮತ್ತು 2 ನೇ ಆರೋಪಿತರಾದ ನೀವು ಮೇಲೆ ವಿವರಿಸಿದ ವಾಹನಗಳನ್ನು ವಿಮೆ ಇಲ್ಲದೆ ಚಲಾಯಿಸಿಕೊಂಡು ಹೋಗಿ ಸದರಿ ರಸ್ತೆಯ ಮೇಲೆ ಸಾರ್ವಜನಿಕ ಸಂಚಾರಕ್ಕೆ ಅಡ್ಡಿಯಾಗುವ ರೀತಿಯಲ್ಲಿ ನಿಲ್ಲಿಸಿದ್ದು ಆದುದರಿಂದ 1 ಮತ್ತು 2 ನೇ ಆರೋಪಿತರಾದ ನೀವು ಭಾರತೀಯ ಮೋಟಾರು ವಾಹನ ಕಾಯ್ದೆಯ ಕಲಂ 122 ಸಹಕಲಂ 177 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರೆಂದು ನಿಮ್ಮ ಮೇಲೆ ಆರೋಪಣೆ ಇರುತ್ತದೆ.

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗು ಸಂದರ್ಭಗಳಂದು 1 ಮತ್ತು 2 ನೇ ಆರೋಪಿತರಾದ ನೀವು ಮೇಲೆ ಹೇಳಿದ ವಾಹನಗಳನ್ನು ವಿಮೆ ಇಲ್ಲದೆ ಚಲಾಯಿಸಿಕೊಂಡು ಹೋಗಿ ಸದರಿ ರಸ್ತೆಯ ಮೇಲೆ ಸಾರ್ವಜನಿಕ ಸಂಚಾರಕ್ಕೆ ಅಡ್ಡಿಯಾಗುವ ರೀತಿಯಲ್ಲಿ ನಿಲ್ಲಿಸಿ ಒಣಗಿಸಲು ಹಾಕಿದ್ದ ಗೋವಿನ ಜೋಳವನ್ನು ತುಂಬುತ್ತಿರುವಾಗ ಮೃತ ಮೂರನೇ ಆರೋಪಿಯು ಮೋಟಾರ್ ಸೈಕಲ್ ಸಂಖ್ಯೆ ಕೆಎ-25/ಇಆರ್-7732 ಅನ್ನು ಹಾನಗಲ್ ಕಡೆಯಿಂದ ನೆಲ್ಲಿಕೊಪ್ಪ ಕಡೆಗೆ ಅತೀ ಜೋರಾಗಿ ಮತ್ತು ನಿಲರ್ಕ್ಷತನದಿಂದ ಮಾನವ ಪ್ರಾಣಕ್ಕೆ ಅಪಾಯವಾಗುವ ರೀತಿಯಲ್ಲಿ ಚಲಾಯಿಸಿಕೊಂಡು ಹೋಗಿ ರಸ್ತೆಯಲ್ಲಿ ಸಂಚಾರಕ್ಕೆ ಅಡ್ಡಿಯಾಗುವ ರೀತಿಯಲ್ಲಿ ನಿಲ್ಲಿಸಿದ್ದ ಮೇಲೆ ಹೇಳಿದ ಟ್ರಾಕ್ಟರ್ ಟ್ರೈಲರ್ ಗೆ ಢಿಕ್ಕಿ ಪಡಿಸಿದ ಪರಿಣಾಮ ಆತನ ಹಣೆ, ತಲೆಗೆ ಪೆಟ್ಟಾಗಿ ಸ್ಥ.ಳದಲ್ಲಿಯೇ ಮೃತ ಪಡುವಂತೆ ಮಾಡಿದ್ದು 1 ಮತ್ತು 2 ನೇ ಆರೋಪಿತರಾದ ನೀವು ಭಾರತೀಯ ದಂಡ ಸಂಹಿತೆಯ ಕಲಂ 283 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರೆಂದು ನಿಮ್ಮ ಮೇಲೆ ಆರೋಪಣೆ ಇರುತ್ತದೆ.

ನಾಲ್ಕನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗು ಸಂದರ್ಭಗಳಂದು 1 ಮತ್ತು 2 ನೇ ಆರೋಪಿತರಾದ ನೀವು ಮೇಲೆ ಹೇಳಿದ ವಾಹನಗಳನ್ನು ವಿಮೆ ಇಲ್ಲದೆ ಹಾಗು ಸೂಕ್ತ ಚಾಲನಾ ಪತ್ರ ಇಲ್ಲದೆ ಚಲಾಯಿಸಿಕೊಂಡಿದ್ದು 1 ಮತ್ತು 2 ನೇ ಆರೋಪಿತರಾದ ನೀವು ಭಾರತೀಯ ಮೋಟಾರು ವಾಹನ ಕಾಯ್ದೆಯ ಕಲಂ 3(1) ಸಹಕಲಂ 181 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರೆಂದು ನಿಮ್ಮ ಮೇಲೆ ಆರೋಪಣೆ ಇರುತ್ತದೆ.

ಕೊನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗು ಸಂದರ್ಭಗಳಂದು 1 ಮತ್ತು 2 ನೇ ಆರೋಪಿತರಾದ ನೀವು ಮೇಲೆ ಹೇಳಿದ ವಾಹನಗಳನ್ನು ವಿಮೆ ಇಲ್ಲದೆ ಹಾಗು ಸೂಕ್ತ ಚಾಲನಾ ಪತ್ರ ಇಲ್ಲದೆ ಚಲಾಯಿಸಿಕೊಂಡು ಅಲ್ಲಿ ನಿಲ್ಲಿಸಿದ್ದ ಪರಿಣಾಮ 3 ನೇ ಆರೋಪಿಗೆ ಮೇಲೆ ವಿವರಿಸಿದಂತೆ ಅಪಘಾತವಾಗಿದ್ದು ಸದರಿ ಅಪಘಾತದ ವಿಷಯವನ್ನು ಹತ್ತಿರದ ಠಾಣೆಗೆ ತಿಳಿಸದೇ ಹೋಗಿದ್ದು 1 ಮತ್ತು 2 ನೇ ಆರೋಪಿತರಾದ ನೀವು ಭಾರತೀಯ ಮೋಟಾರು ವಾಹನ ಕಾಯ್ದೆಯ ಕಲಂ 134(ಎ ಮತ್ತು ಬಿ) ಸಹಕಲಂ 187 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರೆಂದು ನಿಮ್ಮ ಮೇಲೆ ಆರೋಪಣೆ ಇರುತ್ತದೆ.

ಪ್ರಶ್ನೆ:1 ನಿಮಗೆ ತಿಳಿದಿರುವ ಭಾಷೆಯಲ್ಲಿ ಓದಿ ವಿವರಿಸಲಾದ ಆರೋಪಣೆಯನ್ನು ನೀವು ಕೇಳಿ ತಿಳಿದುಕೊಂಡಿರುವಿರಾ?

ಉತ್ತರಃ ತಿಳಿಯಿತು

ಪ್ರಶ್ನೆ: 2 ನೀವು ಮೇಲಿನ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ಆಗಬೇಕೆಂದು ಬಯಸುವಿರಾ?

ಉತ್ತರಃ ತಪ್ಪು ಮಾಡಿಲ್ಲ ವಿಚಾರಣೆಯಾಗಬೇಕು

ಮೇಲ್ಕಾಣಿಸಿದ ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ಸಹಿ/-
(ಅನಿತ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ., ಹಾನಗಲ್.